ಕರ್ನಾಟಕ ಸರ್ಕಾರ

ಸಂಖ್ಯೆ: ಟಿಇಇ/53/ಇಎಫ್ಎಸ್/2019

ನಿರ್ದೇಶಕರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ.
ಅರಮನೆ ರಸ್ತೆ, ಬೆಂಗಳೂರು,
ದಿನಾಂಕ:19/02/2020

**ಜ್ಞಾಪನ**

ವಿಷಯ:- 2020 ರ ಮಾರ್ಚ್/ಏಪ್ರಿಲ್ ಸೆಮಿಸ್ಟರ್ ಡಿಪ್ಲೋಮಾ ಪರೀಕ್ಷೆಗೆ ಬೇಕಾಗಿರುವ ಲೇಖನ ಸಾಮಗ್ರಿಗಳ ಪೂರೈಕೆ ಕೆಲಸಕ್ಕಾಗಿ ನೌಕರರನ್ನು ನಿಯೋಜನೆ ಮಾಡಿರುವ ಬಗ್ಗೆ

ಉಲ್ಲೇಖ:-1)ಈ ಕಛೇರಿ ಸುತ್ತೋಲೆ ಸಂಖ್ಯೆ: ಟಿಇಇ/53/ಇಎಫ್ಎಸ್/2019 ದಿನಾಂಕ:03/01/2020

******

2020 ರ ಮಾರ್ಚ್/ಏಪ್ರಿಲ್ ಡಿಪ್ಲೊಮೊ ಸೆಮಿಸ್ಟರ್ ಪರೀಕ್ಷೆ ನಡೆಸಲು ಬೇಕಾಗುವ ಅಗತ್ಯ ಉತ್ತರ ಪತ್ರಿಕೆಗಳು ಮತ್ತು ಲೇಖನ ಸಾಮಗ್ರಿಗಳ ಬೇಡಿಕೆಯನ್ನು ಕಳುಹಿಸಿಕೊಡುವಂತೆ ಉಲ್ಲೇಖ (1) ರ ಪತ್ರದಲ್ಲಿ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಪಾಲಿಟೆಕ್ನಿಕ್‌ಗಳಿಂದ ಕೋರಲಾಗಿತ್ತು. ಅದರಂತೆ ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳಿಂದ ಬೇಡಿಕೆ ಸಲ್ಲಿಸಿರುತ್ತಾರೆ. ಪ್ರಯುಕ್ತ, ಅವಶ್ಯಕತೆ ಇರುವ ಮುಖ್ಯ/ಪ್ರಾಯೋಗಿಕ ಉತ್ತರ ಪತ್ರಿಕೆಗಳು ಮತ್ತು ಲೇಖನ ಸಾಮಗ್ರಿಗಳನ್ನು ಸಂಬಂಧಪಟ್ಟ ನೋಡಲ್ ಸೆಂಟರ್‌ಗಳ ಮೂಲಕ ಎಲ್ಲಾ ಸಂಸ್ಥೆಗಳಿಗೆ ಹಂತ ಹಂತವಾಗಿ ಕಳುಹಿಸಿ ಕೊಡಬೇಕಾಗಿರುತ್ತದೆ. ಇಎಫ್ಎಸ್ ವಿಭಾಗದ ಪರೀಕ್ಷಾ ಪೂರ್ವ ಕೆಲಸಗಳಾದ 2020 ರ ಮಾರ್ಚ್/ಏಪ್ರಿಲ್ ಡಿಪ್ಲೊಮೊ ಸೆಮಿಸ್ಟರ್ ಪರೀಕ್ಷೆ ನಡೆಸಲು ಬೇಕಾಗುವ ಅಗತ್ಯ ಉತ್ತರ ಪತ್ರಿಕೆಗಳು ಮತ್ತು ಲೇಖನ ಸಾಮಗ್ರಿಗಳನ್ನು ಸಂಸ್ಥೆವಾರು, ಜಿಲ್ಲಾವಾರು, ನೋಡಲ್ ಸೆಂಟರ್‌ವಾರು ವಿಂಗಡಿಸಿ, ಬಂಡಲ್ ಮಾಡುವ ಕಾರ್ಯನಿರ್ವಹಿಸಲು ದಿನಾಂಕ:24/02/2020 ರಿಂದ ಮುಂದಿನ ಆದೇಶದವರೆವೆಗೂ ಈ ಕೆಳಕಂಡ ಸಿಬ್ಬಂದಿಯವರನ್ನು ಪರೀಕ್ಷಾ ಕಾರ್ಯಕ್ಕೆ ನಿಯೋಜಿಸಲಾಗಿದೆ. ಸದರಿ ಅವಧಿಯನ್ನು **"ಅನ್ಯ ಕರ್ತವ್ಯದ ಅವಧಿ"**(ಓಓಡಿ) ಎಂದು ಪರಿಗಣಿಸಲಾಗುವುದು. ಸದರಿಯವರು ನಿಯಮಾನುಸಾರ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ.

| ಕ್ರ.ಸಂ | ಹೆಸರು ಮತ್ತು ಪದನಾಮ | ಸಂಸ್ಥೆಯ ಹೆಸರು |
|---|---|---|
| 01 | ಜಾರ್ಜ್ ವಿಲಿಯಮ್ಸ್, ಯಾಂತ್ರಿಕರು | ಕೆ.ವಿ.ಟಿ.ಪಾಲಿಟೆಕ್ನಿಕ್,ಚಿಕ್ಕಬಳ್ಳಾಪುರ |
| 02 | ರಂಗಸ್ವಾಮಿ ಕೆ.ಆರ್. ಸಹಾಯಕರು | ಪಿ.ವಿ.ಪಿ.ಪಾಲಿಟೆಕ್ನಿಕ್,ಬೆಂಗಳೂರು. |
| 03 | ಪ್ರವೀಣ್‌ಕುಮಾರ್ ಹೆಚ್, ಸಹಾಯಕರು | ಪಿ.ವಿ.ಪಿ.ಪಾಲಿಟೆಕ್ನಿಕ್,ಬೆಂಗಳೂರು. |
| 04 | ಶಿವಣ್ಣ ಟಿ. ಎಸ್., ಸಹಾಯಕರು | ಪಿ.ವಿ.ಪಿ.ಪಾಲಿಟೆಕ್ನಿಕ್,ಬೆಂಗಳೂರು. |
| 05 | ಎಂ.ಎಸ್. ರೇವಣ್ಣ, ಗ್ರೂಪ್-ಡಿ | ಎ.ಪಿ.ಎಸ್.ಪಾಲಿಟೆಕ್ನಿಕ್, ಸೋಮನಹಳ್ಳಿ. |

19/12/2020

ಜಂಟಿ ನಿರ್ದೇಶಕರು (ಪರೀಕ್ಷೆ)
ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು

19/2/2020 19/02/2020

**ಇವರಿಗೆ,**

1..ಪ್ರಾಂಶುಪಾಲರು, ಕೆ.ವಿ.ಟಿ.ಪಾಲಿಟೆಕ್ನಿಕ್,ಚಿಕ್ಕಬಳ್ಳಾಪುರ, ಮುಂದಿನ ಕ್ರಮಕ್ಕಾಗಿ
2.ಪ್ರಾಂಶುಪಾಲರು, ಪಿ.ವಿ.ಪಿ.ಪಾಲಿಟೆಕ್ನಿಕ್,ಬೆಂಗಳೂರು, .ಮುಂದಿನ ಕ್ರಮಕ್ಕಾಗಿ
3.ಪ್ರಾಂಶುಪಾಲರು, ಎ.ಪಿ..ಎಸ್.ಪಾಲಿಟೆಕ್ನಿಕ್,ಬೆಂಗಳೂರು, ಮುಂದಿನ ಕ್ರಮಕ್ಕಾಗಿ
4.ಸಂಯೋಜನಾಧಿಕಾರಿಗಳು, ಇ-ಆಡಳಿತ, ವಿಭಾಗ-ಅಂತರ್ಜಾಲಕ್ಕೆ ಅಳವಡಿಸುವ ಸಲುವಾಗಿ
5.ಮೇಲ್ಕಂಡ ಸಿಬ್ಬಂದಿಯವರಿಗೆ ಪ್ರಾಂಶುಪಾಲರ ಮೂಲಕ.